# ಕನ್ನಡ ಸಾಹಿತ್ಯ ಪರಿಷತ್ತು(ನೋಂ)

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–೫೬೦ ೦೧೮

ದೂರವಾಣಿ : ೦೮೦ ೨೬೬೨೩೯೫೧, ೨೬೬೨೫೫೮೪, ೨೨೪೨೫೭೭೭, ೨೬೬೨೩೫೮೨

http://www.kasapa.in e-mail : kannadaparishattu@gmail.com

ಸ್ಥಾಪನೆ : ೧೯೧೫


ದಿನಾಂಕ : ೬ ಜೂನ್ ೨೦೨೫

ಕನ್ನಡ ಸಾಹಿತ್ಯ ಪರಿಷತ್ತಿನ ನಿಯಮ–ನಿಬಂಧನೆಗಳು (೩೦)ರ ಪ್ರಕಾರ ಕರೆದಿರುವ

## ವಾರ್ಷಿಕ ಸಾಮಾನ್ಯ ಸಭೆಯ ತಿಳುವಳಿಕೆಯ ಪತ್ರ (ಪರಿಷ್ಕೃತ

ಕನ್ನಡ ಸಾಹಿತ್ಯ ಪರಿಷತ್ತಿನ ನಿಯಮ–ನಿಬಂಧನೆಗಳು (೩೦)ರ ಪ್ರಕಾರ ಕರೆದಿರುವ "ಪರಿಷತ್ತಿನ ೧೧೮ನೆಯ ಹಾಗೂ ೨೦೨೩–೨೪ನೆಯ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ ೨೭–೦೪–೨೦೨೫ರ ಭಾನುವಾರದಂದು ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ನಂದಿಹಳ್ಳಿಯಲ್ಲಿರುವ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಬಳ್ಳಾರಿ ಜಿಲ್ಲೆಯ ಸ್ಥಳೀಯ ಸದಸ್ಯರು ಹಾಗೂ ಅಧಿಕಾರಿಗಳ ಕೋರಿಕೆಯ ಮೇರೆಗೆ ವಾರ್ಷಿಕ ಸಾಮಾನ್ಯ ಸಭೆಯನ್ನು ಮುಂದೂಡಲಾಗಿತ್ತು.

ಈ ಹಿನ್ನೆಲೆಯಲ್ಲಿ, ಮುಂದೂಡಲಾಗಿದ್ದ "ಪರಿಷತ್ತಿನ ೧೧೮ನೆಯ ಹಾಗೂ ೨೦೨೩–೨೪ನೆಯ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ ೨೯–೦೬–೨೦೨೫ರ ಭಾನುವಾರ ಬೆಳಗ್ಗೆ ೧೧.೦೦ ಗಂಟೆಗೆ ಬಳ್ಳಾರಿ ಜಿಲ್ಲೆಯ ಸಂಡೂರಿನ ಕೂಡ್ಲಿಗಿ ರಸ್ತೆಯಲ್ಲಿರುವ ಆದರ್ಶ ಕಲ್ಯಾಣ ಮಂಟಪದಲ್ಲಿ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ ಇವರ ಅಧ್ಯಕ್ಷತೆಯಲ್ಲಿ ೧೧೮ನೆಯ ಹಾಗೂ ೨೦೨೩–೨೪ನೆಯ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ಏರ್ಪಡಿಸಲಾಗಿದೆ.

ದಿನಾಂಕ ೨೧–೦೩–೨೦೨೫ ಮತ್ತು ೧೪–೦೫–೨೦೨೫ರಂದು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ನಿಬಂಧನೆ ೩೦(೫)ರ ಅನ್ವಯ ಪರಿಷತ್ತಿನ ೧೧೮ನೆಯ ಹಾಗೂ ೨೦೨೩–೨೪ನೆಯ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ಬಳ್ಳಾರಿ ಜಿಲ್ಲೆಯ ಸಂಡೂರಿನ ಕೂಡ್ಲಿಗಿ ರಸ್ತೆಯಲ್ಲಿರುವ ಆದರ್ಶ ಕಲ್ಯಾಣ ಮಂಟಪದಲ್ಲಿ ನಡೆಸಲು ಕಾರ್ಯಕಾರಿ ಸಮಿತಿಯು ಒಪ್ಪಿಗೆ ನೀಡಿತು.

ಈ ಸಭೆಯಲ್ಲಿ ನಾಡಗೀತೆ, ಸ್ವಾಗತ, ಶ್ರದ್ಧಾಂಜಲಿಯೊಂದಿಗೆ ಈ ಕೆಳಕಂಡ ವಿಷಯಗಳ ಕುರಿತು ಚರ್ಚಿಸಿ, ತೀರ್ಮಾನಿಸಲಾಗುವುದು. ಗೌರವಾನ್ವಿತ ಸದಸ್ಯರುಗಳು ಈ ಸಭೆಗೆ ಹಾಜರಾಗಲು ಹಾಗೂ ಚರ್ಚೆಯಲ್ಲಿ ಪಾಲ್ಗೊಳ್ಳಲು ವಿನಂತಿಸಿದೆ.

**ಕಾರ್ಯಸೂಚಿ :**

ಅ) ದಿನಾಂಕ ೧೦–೩–೨೦೨೪ರಂದು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಮಲ್ಲಾಡಿಹಳ್ಳಿಯಲ್ಲಿ ನಡೆದ ವಾರ್ಷಿಕ / ವಿಶೇಷ ಸಾಮಾನ್ಯ ಸಭೆಯ ನಡೆವಳಿಗಳ ದೃಢೀಕರಣ.

ಆ) ೨೦೨೩–೨೪ನೆಯ ಸಾಲಿನ ಲೆಕ್ಕಪರಿಶೋಧಿತವಾದ (ಆಡಿಟ್ ಆದ) ವಾರ್ಷಿಕ ಲೆಕ್ಕ ಪತ್ರಗಳ ಮಂಡನೆ.

ಇ) ೨೦೨೪–೨೫ರ ಸಾಲಿನ ವಾರ್ಷಿಕ ಆಯವ್ಯಯವನ್ನು ಚರ್ಚಿಸಿ ಅನುಮೋದಿಸುವ ಬಗ್ಗೆ.

ಈ) ೨೦೨೪–೨೫ರ ಸಾಲಿನ ಹಣಕಾಸಿನ ವರ್ಷಕ್ಕೆ ಲೆಕ್ಕಪರಿಶೋಧಕರ ನೇಮಕಾತಿ ಮತ್ತು ಅವರ ಸಂಭಾವನೆ ನಿಗದಿಪಡಿಸುವ ಬಗ್ಗೆ.

ಉ) ೨೦೨೪–೨೫ನೇ ಸಾಲಿನ ಕ್ರಿಯಾಯೋಜನೆಗಳಿಗೆ ತಗಲುವ ವೆಚ್ಚಕ್ಕೆ ಅನುಮೋದನೆ ನೀಡುವ ಬಗ್ಗೆ.

ಊ) ಸದಸ್ಯರ ವಿರುದ್ಧ ಶಿಸ್ತು ವಿಚಾರಣಾ ವರದಿಗಳ ಬಗ್ಗೆ.

ಋ) ೨೦೨೪–೨೫ರ ಸಾಲಿನ ವರ್ಷಕ್ಕೆ ಕಾರ್ಯಕಾರಿ ಸಮಿತಿಯು ತಯಾರಿಸಿದ ಪರಿಷತ್ತಿನ ಕಾರ್ಯಚಟುವಟಿಕೆಗಳ ಯೋಜನೆಗಳ ಮಂಡನೆ.

ಎ) ಸದಸ್ಯರು ನಿಯಮಾನುಸಾರವಾಗಿ ಕಳುಹಿಸಿರುವ ಇತರೆ ಸೂಚನೆಗಳ ಬಗ್ಗೆ.

ಏ) ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇನ್ನಿತರೆ ವಿಷಯಗಳ ಕುರಿತು.

ಅಧ್ಯಕ್ಷರ ಭಾಷಣ

ವಂದನಾರ್ಪಣೆ

| (ನೇ.ಭ. ರಾಮಲಿಂಗ ಶೆಟ್ಟಿ) | (ಡಾ. ಪದ್ಮಿನಿ ನಾಗರಾಜು) | (ಬಿ.ಎಂ. ಪಟೇಲ್‌ಪಾಂಡು) |
|---|---|---|
| ಗೌರವ ಕಾರ್ಯದರ್ಶಿ | ಗೌರವ ಕಾರ್ಯದರ್ಶಿ | ಗೌರವ ಕೋಶಾಧ್ಯಕ್ಷರು |

**ಸೂಚನೆಗಳು:**

೧. ೨೦೨೩–೨೪ನೇ ಸಾಲಿನ ವಾರ್ಷಿಕ ವರದಿಯನ್ನು **ದಿನಾಂಕ ೧೬–೦೬–೨೦೨೫ರಿಂದ** ಪರಿಷತ್ತಿನ ಕಚೇರಿ ವೇಳೆಯಲ್ಲಿ ಖುದ್ದಾಗಿ ಬಂದು ಅಥವಾ **ಅಂಚೆ ವೆಚ್ಚ ರೂ. ೨೦/–** ಕಳುಹಿಸಿ ಪಡೆಯಬಹುದಾಗಿದೆ.

೨. ಸಭೆಗೆ ಬರುವ ಕ.ಸಾ.ಪ. ಸದಸ್ಯರು, ಪರಿಷತ್ತಿನ ಗುರುತಿನ ಚೀಟಿ ಅಥವಾ ಜನತಾ ಪ್ರಾತಿನಿಧ್ಯ ಕಾಯ್ದೆಯಲ್ಲಿ ಸೂಚಿಸಿರುವ ಯಾವುದಾದರೂ ಒಂದು **ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರುವುದು.**

೩. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ವಿಷಯಗಳಿಗೆ ಸದಸ್ಯರುಗಳು ನಿಯಮಾನುಸಾರ ವಿಷಯಗಳನ್ನು ಲಿಖಿತ ರೂಪದಲ್ಲಿ **ಸಭೆಯ ದಿನಾಂಕಕ್ಕೆ ಕನಿಷ್ಠ ಎರಡು ವಾರಗಳಿಗೆ ಕಡಿಮೆ ಇಲ್ಲದಷ್ಟು ಮುಂಚಿತವಾಗಿ ಅಧ್ಯಕ್ಷರು, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು –** ಇವರಿಗೆ ಕಳುಹಿಸಿಕೊಡುವುದು. ತದನಂತರ ಸಲ್ಲಿಕೆಯಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

೪. ವಾರ್ಷಿಕ ಸಾಮಾನ್ಯ ಸಭೆಯು ನಿಯಮ ೩೦ರ ಪ್ರಕಾರ ಡಿಸೆಂಬರ್ ಮೂವತ್ತೊಂದನೆ ದಿನಾಂಕದ ಒಳಗಾಗಿ ನಡೆಸಬೇಕಾಗಿತ್ತು. ಆದರೆ ೨೦೨೩–೨೪ನೇ ಸಾಲಿನ ಲೆಕ್ಕಪರಿಶೋಧನೆಯು ಪೂರ್ಣಗೊಂಡಿರುವುದಿಲ್ಲ ಹಾಗೂ ಡಿಸೆಂಬರ್‌ನಲ್ಲಿ ೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಲಿರುವ ಕಾರಣದಿಂದಾಗಿ ಹಾಗೂ **ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಬಿಸಿಲಿನ ತಾಪಮಾನ ತುಂಬಾ ಹೆಚ್ಚಾಗಿರುವುದರಿಂದ ಮಧ್ಯಾಹ್ನದ ಸಮಯದಲ್ಲಿ ಕಾರ್ಯಕ್ರಮವನ್ನು ಆಯೋಜಿಸುವುದರಿಂದ ಸಾರ್ವಜನಿಕರಿಗೆ, ವಿಶೇಷವಾಗಿ ಹಿರಿಯ ನಾಗರೀಕರಿಗೆ ಸೂರ್ಯಾಘಾತ (Sunstroke) ಅಥವಾ ಇತರ ಸಂಬಂಧಿತ ಆರೋಗ್ಯ ತೊಂದರೆಗಳ ಕಾರಣದಿಂದಾಗಿ, ಸಹಕಾರ ಸಂಘಗಳ ಉಪ ನಿಬಂಧಕರ ಪತ್ರ ಸಂಖ್ಯೆ : ಡಿಆರ್‌ಬಿ–೨/ಎಸ್‌ಒಆರ್/ಎಜಿಎಂ/೨೧/೨೦೨೫–೨೬ರ ದಿನಾಂಕ ೨೨–೦೪–೨೦೨೫ರ ಪತ್ರದಂತೆ, ಜೂನ್–೨೦೨೫ರೊಳಗೆ ನಡೆಸಲು ಅನುಮತಿ ನೀಡಿದೆ.**

**೫. ಕ.ಸಾ.ಪ. ನಿಬಂಧನೆ ಸಂಖ್ಯೆ ೩೦(೬)ರಂತೆ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರವನ್ನು ಈ ಸಭೆಯನ್ನು ನಿಗದಿಗೊಳಿಸಿದ ದಿನಾಂಕಕ್ಕಿಂತ ಕನಿಷ್ಠ ಇಪ್ಪತ್ತೊಂದು ದಿನಗಳ ಮುಂಚಿತವಾಗಿ ಸಾಮಾಜಿಕ ಜಾಲತಾಣ–https://kannadasahithyaparishattu.in ಅಥವಾ http://kasapa.in /ಮೊಬೈಲ್ ಆ್ಯಪ್/ಪತ್ರದ ಮೂಲಕ ಪ್ರಕಟಿಸಿ ಜಾರಿಗೊಳಿಸಲಾಗಿದೆ ಹಾಗೂ ಸಭಾ ಸೂಚನಾ ಪತ್ರದ ಪ್ರತಿಯನ್ನು ಪರಿಷತ್ತಿನ ಎಲ್ಲ ಘಟಕಗಳ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಯಾವುದೇ ಸಂಧರ್ಭದಲ್ಲಿ ಯಾವುದೇ ಸದಸ್ಯರಿಗೆ ಸೂಚನಾ ಪತ್ರ ಅವರ ಗಮನಕ್ಕೆ ಬಂದಿರಲಿಲ್ಲ ಎನ್ನುವ ಕಾರಣ ಮಾತ್ರಕ್ಕೆ ಸಭೆಯನ್ನು ಅಸಿಂಧು ಎಂದು ಪರಿಗಣಿಸತಕ್ಕದ್ದಲ್ಲ.**

**ವಿಶೇಷ ಸೂಚನೆ : ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡವರನ್ನು ಸಂಪರ್ಕಿಸಲು ಕೋರಿದೆ**

೧. **ಶ್ರೀ ನಿಷ್ಠಿ ರುದ್ರಪ್ಪ, ಅಧ್ಯಕ್ಷರು,** ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, **ಮೊ. ೯೩೪೨೭ ೨೬೯೮**
**೨. ಶ್ರೀ ಪರಮೇಶಯ್ಯ ಸೊಪ್ಪಿನಮಠ., ಗೌರವ ಕಾರ್ಯದರ್ಶಿ,** ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, **ಮೊ. ೯೩೪೧೪ ೪೪೮೬೫**
೩. **ಡಾ. ಶಿವಲಿಂಗಪ್ಪ ಕೆ., ಗೌರವ ಕಾರ್ಯದರ್ಶಿ,** ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, **ಮೊ. ೯೯೮೦೩ ೪೬೪೭೪**
೪. **ಡಾ. ಬಸವರಾಜ ಗದುಗಿನ, ಗೌರವ ಕೋಶಾಧ್ಯಕ್ಷರು,** ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, **ಮೊ. ೯೪೪೮೫ ೪೪೩೧೦**
**೫. ಶ್ರೀ ಬಿ. ನಾಗನಗೌಡ, ಅಧ್ಯಕ್ಷರು, ಸಂಡೂರು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಮೊ : ೯೪೪೮೨ ೭೧೪೭೭**
೬. **ಶ್ರೀ ನೇ.ಭ. ರಾಮಲಿಂಗ ಶೆಟ್ಟಿ, ಗೌರವ ಕಾರ್ಯದರ್ಶಿ,** ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು, **ಮೊ. ೯೪೪೮೬ ೮೬೩೩೮**
೭. **ಡಾ. ಪದ್ಮಿನಿ ನಾಗರಾಜು, ಗೌರವ ಕಾರ್ಯದರ್ಶಿ,** ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು, **ಮೊ. ೯೮೪೪೧ ೮೭೫೦೦**
೮. **ಶ್ರೀ ಬಿ.ಎಂ. ಪಟೇಲ್‌ಪಾಂಡು, ಗೌರವ ಕೋಶಾಧ್ಯಕ್ಷರು,** ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು, **ಮೊ. ೯೭೩೧೮ ೨೨೩೧೧**
೯. **ಶ್ರೀ ಪಾರ್ಶ್ವನಾಥ, ವ್ಯವಸ್ಥಾಪಕರು,** ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು, **ಮೊ. ೯೯೦೧೦ ೫೯೮೮೮**